# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 240 (274) |
| ಸದಸ್ಯರ ಹೆಸರು | ಶ್ರೀ ಎಂ.ನಾಗರಾಜು (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 29.01.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳಕೆಯಾಗದ ಮದ್ಯ ಪರವಾನಗಿಗಳ ಹರಾಜಿಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡಿದ ನಿಯಮಗಳ (ನಿಯಮ 5 ಮತ್ತು 5A) ಅನುಷ್ಠಾನಕ್ಕೆ ಕರ್ನಾಟಕ ಹೈಕೋರ್ಟ್ ತಡೆ ನೀಡಿದ ನಂತರ ಈ ಹರಾಜಿನಿಂದ ನಿರೀಕ್ಷಿತ ರೂ.1000 ಕೋಟಿಗಳ ಆದಾಯ ಸಂಗ್ರಹ ಗುರಿಯ ಸ್ಥಿತಿಗತಿ ಏನು; | 569 ಅಬಕಾರಿ ಸನ್ನದುಗಳನ್ನು ಇ-ಹರಾಜು ಮೂಲಕ ಹರಾಜು ಮಾಡಲು ಉದ್ದೇಶಿಸಿ ಸರ್ಕಾರವು ಅಧಿಸೂಚನೆ ಸಂಖ್ಯೆ:ಎಫ್‌ಡಿ/52/ಇಎಫ್‌ಎಲ್/2025, ದಿನಾಂಕ:19-12-2025 ಅನ್ನು ಹೊರಡಿಸಿರುತ್ತದೆ.<br><br>ಸದರಿ ಅಧಿಸೂಚನೆಯನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು ಮತ್ತು ಧಾರವಾಡ ಪೀಠಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ಧಾರವಾಡ ಪೀಠದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:110093/2025 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:26-12-2025 ರಂದು ವಿಚಾರಣೆ ನಡೆಸಿ, ಹರಾಜು ಪ್ರಕ್ರಿಯೆಗೆ ಮುಂದಿನ ಆದೇಶದವರೆಗೆ ತಡೆಯಾಜ್ಞೆ ನೀಡುರುತ್ತದೆ.<br><br>ಪ್ರಸ್ತುತ ತಡೆಯಾಜ್ಞೆ ಜಾರಿಯಲ್ಲಿರುವುದರಿಂದ ಹರಾಜು ಪ್ರಕ್ರಿಯೆಯನ್ನು ಮುಂದೂಡಲಾಗಿರುತ್ತದೆ. |
| ಆ) | "ಅತಿಯಾದ ನಿಯೋಜನೆ ಮತ್ತು ಅನಿಯಂತ್ರಿಕತೆಯ ಗಂಭೀರ ಪ್ರಶ್ನೆಗಳನ್ನು "(serious questions of excess delegation and arbitrariness) ಕರ್ನಾಟಕ ಹೈಕೋರ್ಟ್ ಗಮನಿಸಲು ಕಾರಣವಾದ ಅಬಕಾರಿ ನಿಯಮಗಳಿಗೆ (2025) ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಇಲಾಖೆಯ ಸಮರ್ಥನೆ ಏನು; | ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:110093/2025 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:26-12-2025 ರಂದು ವಿಚಾರಣೆ ನಡೆಸಿ, ಹರಾಜು ಪ್ರಕ್ರಿಯೆಗೆ ಮುಂದಿನ ಆದೇಶದವರೆಗೆ ತಡೆಯಾಜ್ಞೆ ನೀಡಿದ್ದು, ಸದರಿ ಆದೇಶದಲ್ಲಿ "......The impugned amendments prima facie, raise a substantial issue as to excess delegation and arbitrariness warranting judicial scrutiny." ಎಂದು ಉಲ್ಲೇಖಿಸಲಾಗಿರುತ್ತದೆ. |

| | | |
|---|---|---|
| | | ಕರ್ನಾಟಕ ಅಬಕಾರಿ ಕಾಯ್ದೆ,1965 ಕಲಂ 71 ರನ್ವಯ ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವಿದ್ದು, ಅದರಂತೆ ಕರ್ನಾಟಕ ಅಬಕಾರಿ(ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 5 ಮತ್ತು 5-ಎ ಗಳನ್ನು ತಿದ್ದುಪಡಿ ಮಾಡಲಾಗಿರುತ್ತದೆ. ಆದುದರಿಂದ ಮಾನ್ಯ ಉಚ್ಛ ನ್ಯಾಯಾಲಯದ ದಿನಾಂಕ:26-12-2025 ರ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ರಿಟ್ ಅಪೀಲು ಅನ್ನು ದಾಖಲಿಸಲಾಗಿರುತ್ತದೆ. |
| ಇ) | 2025-2026ರ ಅವಧಿಯಲ್ಲಿ ಎಷ್ಟು CL-7 (Boarding & Lodging) ಪರವಾನಿಗೆಗಳನ್ನು ನೀಡಲಾಗಿದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ಪರವಾನಿಗೆಗಳ ದುರುಪಯೋಗವನ್ನು ತಡೆಯಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ: ಹಾಗೂ CL-2 ಪರವಾನಗಿ ನೀಡಲಾಗಿರುವ ವೈನ್ ಸ್ಟೋರ್‌ಗಳಲ್ಲಿಯೇ ಸಾರ್ವಜನಿಕರಿಗೆ ಮಧ್ಯ ಸೇವಿಸಲು ಕಾನೂನು ಬಾಹಿರವಾಗಿ ಅವಕಾಶ ನೀಡಿದ್ದು. ಇದರಿಂದಾಗಿ ರಸ್ತೆಗಳಲ್ಲಿ ಹೋಡಾಡುವ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಇಂತಹ ವೈನ್ ಸ್ಟೋರ್ ಗಳ ವಿರುದ್ಧ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಇರುವುದಕ್ಕೆ ಕಾರಣಗಳೇನು? | 2025-26 ನೇ ಸಾಲಿನಲ್ಲಿ (01-07-2025 ರಿಂದ ಪ್ರಸ್ತುತ ದಿನಾಂಕದವರೆಗೆ) 240 ಸಿಎಲ್-7 ಸನ್ನದುಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಸಿಎಲ್-7 ಸನ್ನದು ಹೊಂದಿರುವವರು ಅಬಕಾರಿ ಕಾಯ್ದೆ/ನಿಯಮಾನುಸಾರ ಕಾರ್ಯನಿರ್ವಹಿಸಬೇಕಾಗಿದ್ದು ಅಧಿಕಾರಿಗಳು ಅನಿರೀಕ್ಷಿತ ಭೇಟಿ ನೀಡಿ ಸನ್ನದು ತಪಾಸಣೆ ಸಮಯದಲ್ಲಿ ನಿಯಮ ಉಲ್ಲಂಘನೆಗಳನ್ನು ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳಲಾಗುತ್ತಿದೆ. 2025-26 ನೇ ಸಾಲಿನಲ್ಲಿ (01-04-2025 ರಿಂದ 31-10-2025 ರವರೆಗೆ) ಸಿಎಲ್-7 ಸನ್ನದುಗಳು ಅಬಕಾರಿ ನಿಯಮಗಳು ಹಾಗೂ ಸನ್ನದು ಷರತ್ತುಗಳನ್ನು ಉಲ್ಲಂಘನೆ ಮಾಡಿರುವವರ ವಿರುದ್ಧ ಒಟ್ಟು 2,251 ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಿ ಅಗತ್ಯ ಕ್ರಮಕ್ಕೈಗೊಳ್ಳಲಾಗಿದೆ.<br><br>CL-2 ಸನ್ನದು ಆವರಣದಲ್ಲಿ ಮದ್ಯ ಸೇವನೆಗೆ ಅವಕಾಶ ಮಾಡಿರುವ ಕುರಿತಂತೆ ಅಧಿಕಾರಿಗಳು ನಿಯಮಿತವಾಗಿ/ಕಾಲಕಾಲಕ್ಕೆ ಅನಿರೀಕ್ಷಿತ ಭೇಟಿ ನೀಡಿ ತಪಾಸಣೆ ನಡೆಸಿದ ಸಂದರ್ಭಗಳಲ್ಲಿ ಹಾಗೂ ಸಾರ್ವಜನಿಕರಿಂದ ಸ್ವೀಕೃತವಾದ ದೂರುಗಳಿಂದ ಸನ್ನದು ಮಳಿಗೆಗಳಲ್ಲಿ ಅಬಕಾರಿ ಕಾಯ್ದೆ/ನಿಯಮ ಹಾಗೂ ಸನ್ನದು ಷರತ್ತು ಉಲ್ಲಂಘನೆ ಮಾಡಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಅಂತಹ ಸನ್ನದುಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ ಅಗತ್ಯ ಕ್ರಮಕ್ಕೈಗೊಳ್ಳಲಾಗಿರುತ್ತದೆ. 2025-26 ನೇ |

| | | |
|---|---|---|
| | | ಸಾಲಿನಲ್ಲಿ (01-04-2025 ರಿಂದ 31-10-2025 ರವರೆಗೆ) CL-2 ಸನ್ನದು ಆವರಣದಲ್ಲಿ ಮದ್ಯ ಸೇವನೆಗೆ ಅವಕಾಶ ಮಾಡಿ ಕೊಟ್ಟು ಸನ್ನದು ಷರತ್ತು ಉಲ್ಲಂಘಿಸಿದವರ ವಿರುದ್ಧ ಒಟ್ಟು 191 ಪ್ರಕರಣಗಳನ್ನು ದಾಖಲಿಸಿ ಅಗತ್ಯ ಕ್ರಮಕ್ಕೈಗೊಳ್ಳಲಾಗಿದೆ. |

**ಆಇ 21ಇಎಲ್‌ಕ್ಯೂ2026**

(ಆರ್.ಬಿ.ತಿಮ್ಮಾಪುರ)
**ಅಬಕಾರಿ ಸಚಿವರು**